ಶ್ರೀ ಎ. ಜೆ. ದೊಡ್ಡಮೇಟಿ.—ಈ ಹದಿನೈದು ಮೈಲಿಗಳ ರಸ್ತೆಯನ್ನು ಮಾಡುವ ಭಾಗಗಳಲ್ಲಿರುವ ಆಯಾ ರೈತರು ತಮಗೆ ಸೇರಿದ ಜಮೀನನ್ನು ಈ ಕೆಲಸಕ್ಕಾಗಿ ಪುಕ್ಕಟೆ ಯಾಗಿ ಸರಕಾರಕ್ಕೆ ಕೊಡುವುದಕ್ಕೆ ಸಿದ್ಧವಾಗಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಎನ್. ನಾಗನೂರು.—ಇರಬಹುದು.

ಶ್ರೀ ಸಿ. ಜೆ ಅಂಬ್ಲೆ.—(ಡಿ)ಗೆ ಉತ್ತರವಾಗಿ ಪರ್ಯಾಲೋಚಿಸಲಾಗುವುದು ಎಂದು ಹೇಳಿದ್ದೀರಿ. ಇನ್ನೂ ಎಷ್ಟುಕಾಲ ಬೇಕಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದಕ್ಕೆ ಸ್ವಲ್ಪ ಕಾಲ ತೆಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ ತಮ್ಮ ಮುಂದೆ ಲೋಕಲ್ಲು ಬೋರ್ಡಿನ ಬಿಲ್ಲುಬಂದಿದೆ, ಅದು ಈ ಸಭೆಯಲ್ಲಿ ಪಾಸಾದನಂತರ ಯಾವ ಯಾವ ರಸ್ತೆಗಳನ್ನು ಲೋಕಲು ಬೋರ್ಡು ತೆಗೆದುಕೊಳ್ಳಬೇಕು, ಯಾವ ಯಾವ ರಸ್ತೆಗಳನ್ನು ಪಿ.ಡಬ್ಲು.ಡಿ.ಗೆ ತೆಗೆದುಕೊಳ್ಳಬೇಕು, ಎಷ್ಟು ಫಂಡುಗಳನ್ನು ಕೊಡ ಬೇಕು ಎನ್ನುವ ವಿವರಗಳೆಲ್ಲ ಈ ಬಿಲ್ಲಿನಲ್ಲಿದೆ. ಈ ಬಿಲ್ಲು ಪಾಸಾಗಿ ಬಂದನಂತರ ಇವನ್ನೆಲ್ಲ ಪರಿಶೀಲನೆ ಮಾಡುತ್ತೇವೆ.

ಶ್ರೀ ಎ. ಜೆ. ದೊಡ್ಡಮೇಟಿ.—ಇವೆಲ್ಲ ಆಗ ಬೇಕಾದರೆ ಇನ್ನೆಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹಣವನ್ನು ಎಷ್ಟು ಬೇಗ ಒದಗಿಸಿಕೊಟ್ಟರೆ ಅಷ್ಟುಬೇಗ ನಾವು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಲು ಆಗುತ್ತದೆ.

Submersion of Land in Hirekaunsi and Havangi villages due to rise in waste weir levels of Tanks.

*Q.—497. Sri B. R. PATIL (Hangal).—

Will the Government be pleased to state :—

(*a*) whether it is not a fact that in all about forty acres of fertile paddy lands will be submerged in water during rainy season, consequent upon raising the wasteweir levels of the tank in R.S. No. 55 at Hirekaunsi village and other tank in R.S. No. 30 at Havangi village in Hangal Taluk ;

(*b*) whether they intend to lower the wasteweir levels or acquire the lands that will be submerged and grant fair compensation to the owners of the said lands immediately ;

(*c*) if Government acquires those lands whether Government intend to grant Government waste lands for sale or for cultivation to those affected persons who apply for the same in preference to the claims of any others ?

*A.—Sri H. M. CHANNABASAPPA (Minister for Public Works and Electricity).—

(*a*) An area of 13 A. 20 G. 8 As. of Hire-kaunshi Village is submerged consequent upon the raising the waste-weir by 2 ft. of the tank in S. No. 55 of Hirekaunshi village in Hangal Taluk. There is no proposal to raise the wasteweir level of the tank in S. No. 30 of Havangi village.

(*b*) There is no proposal before Government to lower the level of the wasteweir tank in S. No. 55 of Hirekaunsi. Compensation will be paid to the owners of land in accordance with the provisions of the Land Acquisition Act.

The question does not arise in the case of Havangi Tank.

(*c*) Yes, to the extent lands are available for grant.

ಶ್ರೀ ಬಿ. ಆರ್. ಪಾಟೀಲ್.—ಸರ್ವೆ ನಂಬರು 30ರಲ್ಲಿ ವೇನ್ಸು ವೇರನ್ನು ಹೆಚ್ಚು ಮಾಡಿಲ್ಲದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

†Sri M. N. NAGHNOOR.—According to the information I have before me, there is no proposal to raise the waste-weir level of the tank in S. No. 30.

ಶ್ರೀ ಬಿ. ಆರ್. ಪಾಟೀಲ್.—ಮೂವತ್ತು ಎಕರೆ ಗಳಷ್ಟು ಜಮೀನು ಮುಳುಗಡೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

Sri H. M. CHANNABASAPPA.—It will be examined.

ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ.—ಹಾಗಾದರೆ ಈಗ ಬಂದಿರುವ ಉತ್ತರ ಸರಿಯಾಗಿಲ್ಲ ಎಂದು ತಿಳಿದು ಕೊಳ್ಳಬಹುದೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರಕಾರದ ಅಂಕ ಅಂಶಗಳ ಆಧಾರದ ಮೇಲೆ ಬಂದಿರುವ ಉತ್ತರಗಳು ಸರಿಯಾಗಿವೆ ಎಂದು ಸರಕಾರದ ಅಭಿಪ್ರಾಯ ವಾಗಿದೆ.

ಶ್ರೀ ಬಿ. ಆರ್. ಪಾಟೀಲ್.—ಸರ್ವೆ ನಂಬರು ಮೂವತ್ತರ ಕೆರೆಯನ್ನು ಐದಾರು ವರ್ಷಗಳ ಮೊದಲೇ ಯೋಚನೆ ಮಾಡುತ್ತೇವೆ ಎಂದು ಒಂದು ಪ್ರಪೋಸಲ್ಲು ಆಗಿತ್ತು. ಇದು ನಾಲ್ಕೈದು ವರ್ಷಗಳ ಹಿಂದಿನ ಮಾತು ಆಗಿರುವುದರಿಂದ ಸರಕಾರದ ಗಮನಕ್ಕೆ ಬಂದಿಲ್ಲವೆಂದು ತೋರುತ್ತದೆ ಮೂವತ್ತು ಎಕರೆಗಳಷ್ಟು ಮುಳುಗಡೆ ಆಗಿರುವುದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಿಂದೆ ಯಾವುದೋ ವಿಚಾರವಿತ್ತು, ಎಂದು ಅದರ ಕಾನೂನಿನ ಪ್ರಕಾರ ಏನು ಪರಿಹಾರ ಕೊಡಬೇಕೋ ಅದನ್ನು ಕೊಟ್ಟಿರ ಬೇಕೆಂದು ಭಾವನೆ ಮಾಡುತ್ತೇನೆ. ಒಂದು ವೇಳೆ ಕಾಂಪೆನ್‌ಸೇಷನ್ನು ಕೊಟ್ಟಿಲ್ಲ ಎಂದು ಅದನ್ನು ಕ್ಲೇಮು ಮಾಡಬಹುದು. ಅದಕ್ಕೇನೂ ಅಭ್ಯಂತರ ವಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ನೀರಿನ ಒಳಗಿರತಕ್ಕ ಜಮೀನು ಮುಳುಗಡೆಯಾಗಿರತಕ್ಕ ಬಗ್ಗೆ ಸರಕಾರಕ್ಕೆ ನೋಟೀಸನ್ನು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Sri M. N. NAGHNOOR.—This does not arise out of this.

Regional Arecanut Research Stations under the Second Five-Year Plan.

*Q.—510. Sri S. SUBBAYA NAIK (Puttur).—

Will the Government be pleased to state:—

(*a*) the number of Regional Arecanut Research Stations proposed to be sanctioned by the Central Government for the New Mysore State in the Second Five-Year Plan;

(*b*) out of the above, how many have been established through the efforts of the State Government?

A.—Sri K. F. PATIL (Minister for Agriculture).—

(*a*) There are 3 Area Research Stations workings at the following places in this State:—

1. The Central Areca Research Station, Vittal. (S. Kanara).
2. The Regional Areca Research Station, Thirthahalli.
3. The Regional Area Research Station, Kolihalli, Tumkur District.

The Government are not aware of any other decision of the Central Government regarding the number of Areca Research Stations sanctioned for Mysore under the II Five-Year Plan.

(*b*) The Regional Research Station at Kolihalli and the Central Research Station at Vittal are entirely financed by the Indian Central Arecanut Committee. Whereas the Regional Arecanut Research Station at Thirthahalli is financed on 50 : 50 basis by the State Government and the Indian Central Arecanut Committee.

ಶ್ರೀ ಎನ್. ಸುಬ್ಬಯ್ಯನಾಯಕ್.—ಉತ್ತರದಲ್ಲಿ ಎರಡನೆಯ ಪಾಂಚಪಾರ್ಷಿಕ ಯೋಜನೆಯಲ್ಲಿದ್ದದ್ದು ಎಂದು ಹೇಳಲಾಗಿದೆ. ಇವು ಮೊದಲನೆಯ ಪಾಂಚ ಪಾರ್ಷಿಕ ಯೋಜನೆಯಲ್ಲಿದ್ದ ಕೇಂದ್ರಗಳು. ಇದು ಸರಿಯಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಎಫ್. ಪಾಟೀಲ್.—ಇದರಲ್ಲಿರುವುದು ಸರಿಯಾಗಿದೆ. ಸದಸ್ಯರು ಒಪ್ಪದಿದ್ದರೆ ನಾವು ಅವರನ್ನು ಒಪ್ಪಿಸುವುದಕ್ಕೆ ಆಗುವುದಿಲ್ಲ.

ಶ್ರೀ ಎನ್. ಸುಬ್ಬಯ್ಯನಾಯಕ್.—1958-59, 1959-60ರಲ್ಲಿ ಕೇಂದ್ರ ಸರಕಾರದವರು ನಮ್ಮ ಮೈಸೂರು ರಾಜ್ಯಕ್ಕೆ ಎರಡು ಅಡಕೆ ಸಂಶೋಧನಾ ಕೇಂದ್ರಗಳನ್ನು ಕೊಡಬೇಕೆಂದು ಇದ್ದುದರಲ್ಲಿ ಈಗ ಒಂದನ್ನು ಕೇರಳಕ್ಕೆ ಕೊಟ್ಟಿರುವುದು ನಿಜವೇ?

ಶ್ರೀ ಕೆ. ಎಫ್. ಪಾಟೀಲ್.—ಅದು ನನಗೆಗೊತ್ತಿಲ್ಲ. 1988-59ರಲ್ಲಿ ಒಂದು ರೀಸರ್ಚ್ ಸ್ಟೇಷನ್ನನ್ನು ಪ್ರಾರಂಭಮಾಡಿದ್ದೇವೆ.

1-30 P.M.

Sri A. R. BADRI NARAYAN.—Have the Government submitted any proposal to the Central Government for additional Research Station, Sir?

Sri K. F. PATIL.—No, Sir.

ಶ್ರೀ ಮಂಜಪ್ಪ ಉಳ್ಳಾಲ್.—ಈ ಅಡಕೆ ರಿಸರ್ಚ್ ಸ್ಟೇಷನ್‌ಗಳನ್ನು ತೆಗೆಯುವಾಗ್ಗೆ ಕೇಂದ್ರ ಸರ್ಕಾರದವರು ನಮ್ಮ ಪ್ರಾಂತ ಸರ್ಕಾರದವರ ಸಲಹೆಯನ್ನು ಪಡೆದಿದ್ದಾರೆಯೇ?

ಶ್ರೀ ಕೆ. ಎಫ್. ಪಾಟೀಲ್.—ಕೇಂದ್ರ ಸರ್ಕಾರದವರೂ ಪ್ರಾಂತ್ಯ ಸರ್ಕಾರದ ಅಧಿಕಾರಿಗಳೊಡನೆ ಹೋಗಿ ಸ್ಥಳ ನೋಡಿಕೊಂಡು ಬಂದು, ಕೊನೆಗೆ ಈ ಸ್ಥಳಗಳು ಯೋಗ್ಯವೆಂದು ಹೇಳಿ ತೆರೆದಿದ್ದಾರೆ.

ಶ್ರೀ ಜಿ. ಶಿವಪ್ಪ.—ಅವರು ಅಲ್ಲಿ ರಿಸರ್ಚ್ ಕೆಲಸ ಏನೇನು ನಡೆಸುತ್ತಿದ್ದಾರೆ?

ಶ್ರೀ ಕೆ. ಎಫ್. ಪಾಟೀಲ್.—ಮೊದಲನೆ ಎರಡು ಕೇಂದ್ರಗಳಲ್ಲಿ ಈಗಾಗಲೇ ರಿಸರ್ಚ್ ವರ್ಕ್ ಪ್ರಾರಂಭವಾಗಿದೆ. ಕೊನೆಯದರಲ್ಲಿ ಇದೇ ವರ್ಷ ತಾನೇ ಅದನ್ನು ತೆರೆದಿರುವುದರಿಂದ ಇನ್ನೂ ಕೆಲಸ ಪುರುವಾಗಿಲ್ಲ. ಉತ್ತಮ ಜಾತಿಯ ಗಿಡಗಳನ್ನು ಆರಿಸಿ, ಅವುಗಳಿಂದ ಬೀಜ ತೆಗೆದುಕೊಂಡು, ಯಾವ ಸ್ಥಳದಲ್ಲಿ ಅದನ್ನು ಹಾಕಬೇಕು, ಯಾವ ಕಾಲದಲ್ಲಿ ನೀರು ಹಾಕಬೇಕು, ಅಣಬೆ ರೋಗ ನಿವಾರಣೆ ಮಾಡುವುದಕ್ಕೆ ಏನೇನು ಮಾಡಬೇಕು ಎಂಬ ಬಗ್ಗೆ ಎಲ್ಲಾ ಕಾರ್ಯಕ್ರಮಗಳನ್ನೂ ನಡೆಸುತ್ತಿದ್ದಾರೆ.

Sri C. M. ARUMUGHAM.—Is the Government aware that the Central Research Station at South Canara has not spent the amount last year?

ಶ್ರೀ ಕೆ. ಎಫ್. ಪಾಟೀಲ್.—ಎಷ್ಟು ಹಣ ಖರ್ಚು ಮಾಡಬೇಕಾಗಿತ್ತೋ, ಎಷ್ಟು ಹಣವನ್ನು ಖರ್ಚು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಏಕಂದರೆ ಇದರ ಲೆಕ್ಕವೆಲ್ಲಾ ಕೇಂದ್ರ ಸರ್ಕಾರದಲ್ಲಲ್ಲದೆ.

ಶ್ರೀ ಕುಂದೂರು ರುದ್ರಪ್ಪ.—ಕೇಂದ್ರ ಸರ್ಕಾರದವರನ್ನು ನಮ್ಮ ಸರ್ಕಾರದವರು ರಿಸರ್ಚ್ ಸ್ಟೇಷನ್‌ಗಳು ಬೇಕೆಂದು ಕೇಳಿದ್ದರೇ?

ಶ್ರೀ ಕೆ. ಎಫ್. ಪಾಟೀಲ್.—ಎರಡನೆಯ ಪಾಂಚ ವಾರ್ಷಿಕ ಯೋಜನೆಯು ಪಾರಂಭವಾಗುವುದಕ್ಕೆ ಮೊದಲೇ ಇದನ್ನೆಲ್ಲಾ ಚರ್ಚೆ ಮಾಡಿತ್ತು.

ಶ್ರೀ ಕೆ. ಎಲ್. ನರಸಿಂಹಯ್ಯ.—ಕೋಳಿ ಹಳ್ಳಿ ರಿಸರ್ಚ್ ಸ್ಟೇಷನ್ನಿಗೆ ಬೇಕಾದ ಜಮೀನು ಇನ್ನೂ ಪೂರ್ತಿಯಾಗಿ ಅಕ್ವೈರ್ ಆಗಿಲ್ಲವೆಂದು ಸರ್ಕಾರಕ್ಕೆ ತಿಳಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ?